# ಬೆತ್ತಲಾಗಿದ್ದು ಸಂಯುಕ್ತಾ ಅಲ್ಲ. ಸಮಾಜವ್ಯಾಧಿ!



ಚಿತ್ರರಂಗದ ಡ್ರಗ್ಸ್ ಅಮಲು ನಿಧಾನಕ್ಕೆ ರಾಜಕೀಯ ವಲಯಕ್ಕೂ ಆವರಿಸತೊಡಗಿದೆ. ಜನರ ಕಣ್ಣಿಗೆ ಚಿತ್ರರಂಗದ ಎಲ್ಲರೂ ಅಮಲಿನಲ್ಲಿರುವವರಂತೆ ಕಾಣಿಸುತ್ತಿದ್ದಾರೆ. ಆದರೆ ಅಮಲು ಏರಿಸುವುದು ಡ್ರಗ್ಸ್ ಮಾತ್ರವಲ್ಲ; ಅದು ಚಿತ್ರರಂಗದಲ್ಲಿ ಮಾತ್ರವಲ್ಲ; ಸಮಾಜದಲ್ಲಿಯೂ ಹೇಗೆ ವ್ಯಾಪಿಸಿದೆ ಎಂಬುದಕ್ಕೆ ಇತ್ತೀಚೆಗೆ ನಡೆದ ಒಂದು ಘಟನೆ ಸಾಕ್ಷಿ. ಆ ಘಟನೆಯಲ್ಲಿಯೂ ಕೇಂದ್ರದಲ್ಲಿರುವುದು ಚಿತ್ರನಟಿ ಎಂಬುದು ಕಾಕತಾಳೀಯ ಅನಿಸುವುದಿಲ್ಲ.

ಚಿತ್ರನಟಿ ಸಂಯುಕ್ತಾ ಹೆಗಡೆ ಮತ್ತು ಅವರ ಗೆಳತಿಯರು ಬೆಂಗಳೂರಿನ ಪಾರ್ಕ್‌ನಲ್ಲಿ ವ್ಯಾಯಾಮ ಮಾಡುತ್ತಿದ್ದಾಗ ಅಲ್ಲಿಯೇ ಇದ್ದ ಕವಿತಾ ರೆಡ್ಡಿ ಎಂಬವರು, ಸಂಯುಕ್ತಾ ಧರಿಸಿಕೊಂಡಿದ್ದ ಬಟ್ಟೆಯ ಬಗ್ಗೆ ತಕರಾರು ತೆಗೆದಿದ್ದಾರೆ. ಅಷ್ಟೇ ಅಲ್ಲ, ಅದನ್ನು ಪ್ರಶ್ನಿಸಿದ ಸಂಯುಕ್ತಾ ಗೆಳತಿಯೊಬ್ಬಳ ಮೇಲೆ ಹಲ್ಲೆಗೂ ಮುಂದಾಗಿದ್ದಾರೆ. ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲಿಂದಲೋ ಬಂದ ಒಂದಿಷ್ಟು ಹುಡುಗರು ಗುಂಪುಗೂಡಿ ಸಂಯುಕ್ತಾ ಮತ್ತವರ ಗೆಳತಿಯರ ಬಗ್ಗೆ ಅವಾಚ್ಯವಾಗಿ ಮಾತಾಡಿಸಲು, ನಿಂದಿಸಲು ತೊಡಿದ್ದಾರೆ. ಅಷ್ಟೇ ಅಲ್ಲ, ಕವಿತಾ ರೆಡ್ಡಿ ಅವರು, 'ನೀನು ಇಂಥ ಬಟ್ಟೆ ಹಾಕ್ಕೊಂಡು ಬಂದ್ರೆ ಹೊಡಿಬೇಕಾಗತ್ತೆ' ಎಂದು ಸ್ಪಷ್ಟವಾಗಿ ಹೇಳಿರುವುದು ಸಂಯುಕ್ತಾ ಅವರು ಮಾಡಿದ ವಿಡಿಯೊದಲ್ಲಿ ಸ್ಪಷ್ಟವಾಗಿ ದಾಖಲಾಗಿದೆ. ಮುಂದೆ ಅವರು ಪಾರ್ಕ್‌ನಿಂದ ಹೊರಗೆ ಹೋಗದಂತೆ ಗೇಟಿಗೆ ಬೀಗ ಹಾಕಿ ಕೂಡಿ ಹಾಕಲಾಗಿದೆ.

ವಿಪರ್ಯಾಸದ ಸಂಗತಿ ಏನೆಂದರೆ, ಇಡೀ ಪ್ರಕರಣವನ್ನು ಪೊಲೀಸರು ಮೂಕಪ್ರೇಕ್ಷಕರ ಹಾಗೆ ನಿಂತು ನೋಡಿರುವುದು. ಒಂದು ಹಂತದಲ್ಲಿಯಂತೂ ಪೊಲೀಸರು ಸಂಯುಕ್ತಾಳನ್ನೇ ಆರೋಪಿಯನ್ನಾಗಿಸುವ ಪ್ರಯತ್ನವನ್ನೂ ಮಾಡಿದರು.

ನೈತಿಕ ಪೊಲೀಸ್‌ಗಿರಿಯ ವಿಕೃತಿ ಮತ್ತು ಅದಕ್ಕೆ ನೈಜ ಪೊಲೀಸರ ಬೆಂಬಲದ ವಿಪರ್ಯಾಸ ಎರಡಕ್ಕೂ ಈ ಘಟನೆ ಸಾಕ್ಷಿಯಾಗುವ ಹಾಗಿದೆ. ಕೊನೆಗೆ ಇದಕ್ಕೆ ರಾಜಕೀಯ ಬಣ್ಣವೂ ಸೇರಿಕೊಂಡು ಹೊಸ ಹೊಸ ಬಗೆಯ ತಿರುವುಗಳನ್ನು ತೆಗೆದುಕೊಳ್ಳುತ್ತಿದೆ.

ಕಿರಿಕ್ ಮಾಡಿಕೊಳ್ಳುವುದು ಸಂಯುಕ್ತಾಗೆ ಹೊರತಲ್ಲ. ತಮ್ಮ ಮೊದಲ ಸಿನಿಮಾ 'ಕಿರಿಕ್ ಪಾರ್ಟಿ'ಯ ಶೀರ್ಷಿಕೆಯನ್ನು ತಮ್ಮ ವ್ಯಕ್ತಿತ್ವದ ಅನ್ವರ್ಥಕವಾಗಿಸಿಕೊಂಡವರು ಅವರು. ಚಿತ್ರರಂಗದಲ್ಲಿ ಮತ್ತು ಹೊರಗೆ ಜಗಳಕಾಯುವುದರ ಮೂಲಕ ಅವರು ಆಗಾಗ ಸುದ್ದಿಯಲ್ಲಿರುತ್ತಾರೆ. ಅವರ ಈ ಸ್ವಭಾವವನ್ನೇ ಮುಂದಿಟ್ಟುಕೊಂಡು ಈ ಘಟನೆಯಲ್ಲಿಯೂ ಅವರನ್ನು ತಪ್ಪಿತಸ್ಥೆಯನ್ನಾಗಿಸುವ ಪ್ರಯತ್ನಗಳೂ ನಡೆದವು. ಅವರು ಡ್ರಗ್ಸ್ ತೆಗೆದುಕೊಂಡಿದ್ದಾರೆ ಎಂದು ಎಲ್ಲಿಂದ ಎಲ್ಲಿಗೋ ಜೋಡಿಸುವ ಯತ್ನಗಳೂ ನಡೆದವು.

ಚಿತ್ರರಂಗದ ಹೆಣ್ಣುಮಕ್ಕಳನ್ನು ಅಗ್ಗವಾಗಿ ನೋಡುವುದು ಹೊಸದೇನಲ್ಲ. ಅದು ಸಾಮಾಜಿಕ ಜಾಲತಾಣಗಳಲ್ಲಿ ರಾಜಾರೋಷವಾಗಿಯೇ ನಡೆಯುತ್ತಿತ್ತು. ಅದೀಗ ಸಮಾಜಕ್ಕೂ ವಿಸ್ತರಿಸಿದೆ. ಈ ಎಲ್ಲದರ ನಡುವೆ ಸಂಯುಕ್ತಾ, ಘಟನೆಯನ್ನು ಸೋಷಿಯಲ್ ಮೀಡಿಯಾದಲ್ಲಿ ಲೈವ್ ಮಾಡಿ ಸಮಾಜದ ಮನಸ್ಥಿತಿಯನ್ನು ಬೆತ್ತಲು ಮಾಡಿದ್ದಷ್ಟೇ ಅಲ್ಲ, ಅದನ್ನು ತಿರುಚಲು ಹೊಂಚುಹಾಕಿದ್ದವರ ಬಾಯಿಯನ್ನೂ ಮುಚ್ಚಿಸುವ ದಿಟ್ಟತನ ತೋರಿದ್ದಾರೆ. ಪೊಲೀಸ್ ಠಾಣೆಯಲ್ಲಿ ದೂರನ್ನೂ ದಾಖಲಿಸಿದ್ದರು. ಪರಿಣಾಮವಾಗಿ ಕವಿತಾ ರೆಡ್ಡಿ ಬೇಷರತ್ ಕ್ಷಮೆ ಯಾಚಿಸಿದ್ದಾರೆ. ನಂತರ ಇದು ರಾಜಕೀಯ ಬಣ್ಣ ಬಳಿದುಕೊಂಡು ಕವಿತಾರೆಡ್ಡಿ ಬಂಧನ ಬಿಡುಗಡೆಗಳ ನಾಟಕಗಳೆಲ್ಲವೂ ನಡೆದಿವೆ.

ವಿಡಿಯೊದಲ್ಲಿ ಸಂಯುಕ್ತಾ ಮತ್ತೆ ಮತ್ತೆ ಹೇಳುತ್ತಿದ್ದ ಮಾತು: ದಿಸ್ ಈಸ್ ಸೋ ರಾಂಗ್!

ಈಗಲೂ ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಸಂಯುಕ್ತಾ ಘಟನೆಯನ್ನು ತಿರುಚಿ ಹೇಳುತ್ತ 'ಸರಿಯಾಗಿ ಬುದ್ಧಿ ಕಲಿಸಿದ್ದಾರೆ' ಎಂದು ಬೀಗುತ್ತಿದ್ದಾರೆ. ಆದರೆ ಸಂಯುಕ್ತಾ ಅಥವಾ ಇನ್ನಾವುದೇ ಹುಡುಗಿಯರ ಹೀಗೆ ನಡೆದುಕೊಳ್ಳುವುದರ ಮೂಲಕ ಅವರಿಗೆ ಬುದ್ಧಿ ಕಲಿಸುವುದು ಒತ್ತಟ್ಟಿಗಿರಲಿ, ಒಟ್ಟಾರೆ ಸಮಾಜವಾಗಿ ನಾವು ಬೆತ್ತಲಾಗುತ್ತಿದ್ದೇವೆ ಎಂಬುದರ ಅರಿವು ಅವರಿಗೆ ಇದ್ದಂತಿಲ್ಲ. ಯಾಕೆಂದರೆ ಈ ಸಮಾಜವ್ಯಾಧಿಗೆ ಸುಲಭದ ಮದ್ದಿಲ್ಲ. ಯೆಸ್. ದಿಸ್ ಈಸ್ ಸೋ ರಾಂಗ್!